ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ವಕೀಲರ ಸಂಘ, ನೆಲಮಂಗಲ ವಿರುದ್ಧ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು

ಮತ್ತು ಇನ್ನೊಬ್ಬರು

ರಿಟ್ ಅರ್ಜಿಸಂಖ್ಯೆ: 1771/2015 (ಜಿಎಂ-ಆರ್‌ಇಎಸ್),ದಿನಾಂಕ: 20 ನೇ ಸೆಪ್ಟೆಂಬರ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:

ಇದು, ಕಕ್ಷಿದಾರ ಸಾರ್ವಜನಿಕರ ಶ್ರೇಯೋಭಿವೃದ್ಧಿಗಾಗಿ ಸಮಾಜ ಸುಧಾರಕರಾಗಿ ವರ್ತಿಸಬೇಕಾದ ವಕೀಲರ ಸಂಘದ ಸದಸ್ಯರು ತಮ್ಮಲ್ಲೇ ಎರಡು ಸಂಘಗಳಾಗಿ ಬೇರ್ಪಟ್ಟು ತಮ್ಮ ಅಹಂ| ಸ್ವಾರ್ಥಕ್ಕಾಗಿ ಹೋರಾಡುತ್ತಿರುವಂತಹ ದುರದೃಷ್ಟಕರವಾದ ವ್ಯಾಜ್ಯವಾಗಿದೆ.

2. ಅರ್ಜಿದಾರರಾದ ವಕೀಲರ ಸಂಘ, ನೆಲಮಂಗಲ, ನೋಂದಣಿಸಂಖ್ಯೆ: 54/86-87, ಕೆಎಸ್ಪಿಸಿ ಆರ್.ಆರ್.ಸಂಖ್ಯೆ: 35/87 ಇವರು ಅನುಬಂಧ-ಟಿ ಪ್ರಕಾರದಿನಾಂಕ: 16.06.2010 ರಂದು ಮೊದಲನೇ ಎದುರುದಾರ-ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಹೊರಡಿಸಿದ ಬಿಸಿಎಂ ಆರ್‌ಇಎಸ್ಸಂಖ್ಯೆ: 52/10ದಿನಾಂಕ: 12-13.6.2010ರ ಪ್ರಶ್ನಿತ ತೀರ್ಮಾನವನ್ನು ರದ್ದುಗೊಳಿಸಲು ಸರ್ಷಿಯೊರರಿ ರಿಟ್ಟಾಗಿ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

3. 1981 ರಲ್ಲಿ ನೆಲಮಂಗಲದಲ್ಲಿ ಮುನ್ಸಿಫ್ ನ್ಯಾಯಾಲಯ ಸ್ಥಾಪನೆಯಾದ ನಂತರ, ನೆಲಮಂಗಲದಲ್ಲಿ ವೃತ್ತಿ ನಿರತರಾಗಿದ್ದ ಹಿರಿಯ ವಕೀಲರು ಮತ್ತು ವಕೀಲರು ವಕೀಲರ ಸಂಘವನ್ನು ರಚಿಸಿದರು ಮತ್ತು ಅದನ್ನು ಸಂಘಗಳ ರಿಜಿಸ್ಟ್ರಾರ್, ಬೆಂಗಳೂರು ಗ್ರಾಮೀಣ, ಬೆಂಗಳೂರು, ಈ ಕಚೇರಿಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದ ಉಪಬಂಧಗಳ ಅನುಸಾರವಾಗಿದಿನಾಂಕ: 24.02.1987 ರಂದು ನೋಂದಾಯಿಸಿದರು.ದಿನಾಂಕ: 07.06.1987 ರಂದು ಮೊದಲನೇ ಎದುರುದಾರರಾದ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿಗೆ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ರ 13 ನೇ ಪ್ರಕರಣದ ಉಪಬಂಧಗಳಡಿ ಮಾನ್ಯತೆ ನೀಡಿ ಪ್ರಮಾಣೀಕರಣ ನೀಡಲಾಯಿತು.ಅಂದಿನಿಂದ ಅರ್ಜಿದಾರ ಸಂಘವು ವಿವಿಧ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕರ್ನಾಟಕ ಉಚ್ಚನ್ಯಾಯಾಲಯದಿಂದ ಹಾಗೂ ರಾಜ್ಯ ವಕೀಲರ ಪರಿಷತ್ತಿನಿಂದ ಕಳುಹಿಸಲಾದ ಎಲ್ಲಾ ಮಾಹಿತಿಗಳನ್ನು ಸ್ವೀಕರಿಸುವ ಮೂಲಕ ಕಾರ್ಯನಿರತವಾಗಿದೆ.

4. ವಿಷಯ ಹೀಗಿದ್ದಾಗ, ಎರಡನೇ ಎದುರುದಾರರಾದ ನೆಲಮಂಗಲ ವಕೀಲರ ಸಂಘ (ರಿ) ದ ಕೆಲವು ಸದಸ್ಯರು, ನೆಲಮಂಗಲದಲ್ಲಿ ವಕೀಲರ ಸಂಘ ಇಲ್ಲವೆನ್ನುವಷ್ಟರಮಟ್ಟಿಗೆ ಸುಳ್ಳು ಅಫಿಡೆವಿಟ್ಟಳನ್ನು ಸಲ್ಲಿಸುವ ಮೂಲಕ ಸಂಘಗಳ ಉಪ ರಿಜಿಸ್ಟ್ರಾರ್, ಬೆಂಗಳೂರು ಗ್ರಾಮೀಣ ಜಿಲ್ಲೆ, ಬೆಂಗಳೂರು, ಇಲ್ಲಿ ಎರಡನೇ ಎದುರುದಾರ ಸಂಘವನ್ನು ನೋಂದಾಯಿಸಿದರು.ಅರ್ಜಿದಾರ-ಸಂಘವು ಯುಕ್ತವಾಗಿ ನೋಂದಾಯಿತವಾಗಿದೆ ಮತ್ತುಸಂಖ್ಯೆ: 54/1986-87 ಹಾಗೂ 1987 ರ 35ದಿನಾಂಕ: 07.06.1987 ನ್ನು ಹೊಂದಿರುವ ಪ್ರಮಾಣಪತ್ರಗಳನ್ನು ನೀಡಲಾಗಿದೆಯೆಂದು ವಾದಿಸಿ, ಅರ್ಜಿದಾರ-ವಕೀಲರ ಸಂಘವು ಎರಡನೇ ಎದುರುದಾರ-ವಕೀಲರ ಸಂಘದ ಮಾನ್ಯತೆಗಾಗಿ 1 ನೇ ಎದುರುದಾರ-ಕರ್ನಾಟಕ ವಕೀಲರ ಪರಿಷತ್ತಿನ ಮುಂದೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತದೆ.ಅರ್ಜಿದಾರ-ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಮೊದಲನೇ ಎದುರುದಾರರು ಎರಡನೇ

ಎದುರುದಾರರ ಮನವಿಯನ್ನು ಪರಿಗಣಿಸುವುದಿಲ್ಲವೆಂಬ ಭಾವನೆಯನ್ನು ಹೊಂದಿದ್ದರು.ಆದರೆ, ಮಾನ್ಯತೆ ನೀಡುವುದಕ್ಕಾಗಿ ಕೋರಿ ಎರಡನೇ ಎದುರುದಾರ ಸಂಘದ ಪದಾಧಿಕಾರಿಗಳು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ, ಮೊದಲನೇ ಎದುರುದಾರರು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ರ 13 ನೇ ಪ್ರಕರಣದ ( 3) ನೇ ಉಪ-ಪ್ರಕರಣದಡಿ ಯೋಜಿಸಲಾದಂತೆ ಯಾವುದೇ ವಿಚಾರಣೆಯನ್ನು ನಡೆಸದೆ, ಅರ್ಜಿದಾರರಿಗೆ ಯಾವುದೇ ಮಾಹಿತಿ ನೀಡದೆ ಅಥವಾ ಸಂವಹನ ಮಾಡದೆ, ರಹಸ್ಯವಾಗಿ ಠರಾವನ್ನು ಹೊರಡಿಸಿತು ಮತ್ತು ಅರ್ಜಿದಾರ ಸಂಘದ ಈ ಹಿಂದಿನ ನೋಂದಣಿ ಹಾಗೂ ಮಾನ್ಯತೆಯನ್ನು ನಿರ್ಲಕ್ಷಿಸಿ,ದಿನಾಂಕ: 16.06.2010 ರಂದು ಎರಡನೇ ಎದುರುದಾರ ಸಂಘಕ್ಕೆ ಮಾನ್ಯತೆಯನ್ನು ನೀಡಿ ಮಾನ್ಯತಾ ಪ್ರಮಾಣಪತ್ರವನ್ನು ನೀಡಿತು.ತರುವಾಯ, ಎರಡನೇ ಎದುರುದಾರರಿಗೆ ಮಾನ್ಯತೆ ನೀಡಲಾದ ಬಗ್ಗೆ ಅರ್ಜಿದಾರ ಸಂಘಕ್ಕೆದಿನಾಂಕ: 8.12.2014 ರಂದು ತಿಳಿಯಿತು.ಆದುದರಿಂದ, ಅರ್ಜಿದಾರರು ಪರಿಹಾರಕ್ಕಾಗಿ ಕೋರಿ ಈ ನ್ಯಾಯಾಲಯಕ್ಕೆ ಬಂದಿದ್ದಾರೆ.

5. ಮೊದಲನೇ ಎದುರುದಾರರು ರಿಟ್ ರಿಟ್ ಅರ್ಜಿಯಲ್ಲಿ ಮಾಡಲಾದ ಆಪಾದನೆಗಳಿಗೆ ಆಕ್ಷೇಪಣಾ ಪಟ್ಟಿಯನ್ನು ಸಲ್ಲಿಸಿಲ್ಲ.

6. ಎರಡನೇ ಎದುರುದಾರ-ನೆಲಮಂಗಲ ವಕೀಲರ ಸಂಘವು (ರಿ) ರಿಟ್ ಅರ್ಜಿಗೆ ಆಕ್ಷೇಪಣೆಗಳ ಪಟ್ಟಿಯನ್ನು ಸಲ್ಲಿಸಿ, ಅರ್ಜಿದಾರರು ಮುಖ್ಯವಾದ ಸಂಗತಿಗಳನ್ನು ಮುಚ್ಚಿಟ್ಟಿದ್ದಾರೆ ಹಾಗೂ ನ್ಯಾಯಾಲಯಕ್ಕೆ ಶುದ್ಧ ಕೈಗಳಿಂದ ಬಂದಿಲ್ಲ ಮತ್ತು ಆ ಕಾರಣದಿಂದ ಮುಖ್ಯ ಸಂಗತಿಗಳನ್ನು ಬಚ್ಚಿಟ್ಟಿದ್ದಕ್ಕಾಗಿ ರಿಟ್ ಅರ್ಜಿಯು ವಜಾಗೊಳ್ಳಲು ತಕ್ಕುದಾಗಿದೆ ಎಂದು ವಾದಿಸಿತು.ವಿಳಂಬವಾದುದಕ್ಕೆ ಸಮರ್ಪಕ ಕಾರಣಗಳನ್ನು ನೀಡದೆ, 2010 ರಲ್ಲಿ 1 ನೇ ಎದುರುದಾರರು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ, 2015 ರಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದರಿಂದಾಗಿ ನ್ಯಾಯಾಲಯಕ್ಕೆ ಬರುವಲ್ಲಿ ಆದ ವಿಳಂಬಕ್ಕಾಗಿ ರಿಟ್ ಅರ್ಜಿಯು ವಜಾಗೊಳ್ಳಲು ತಕ್ಕುದಾಗಿದೆಯೆಂದು ವಾದಿಸಲಾಗಿದೆ.ಅಷ್ಟೇ ಅಲ್ಲದೆ, ಸದ್ಯದ ರಿಟ್ ಅರ್ಜಿಯಲ್ಲಿ ಒಳಗೊಂಡಿರುವ ಸಂಗತಿಗಳ ವಿವಾದಿತ ಪ್ರಶ್ನೆಗಳಿವೆಯೆಂದೂ ಮತ್ತು ಆ ಕಾರಣದಿಂದ ಸಂಗತಿಗಳ ಅಂಥ ವಿವಾದಿತ ಪ್ರಶ್ನೆಗಳನ್ನು ರಿಟ್ ವ್ಯವಹರಣೆಗಳಲ್ಲಿ ಸೇರಿಸಲಾಗುವುದಿಲ್ಲವೆಂದೂ ಸಹ ವಾದಿಸಲಾಗಿದೆ.

7. ಮುಂದುವರೆದು, ರಿಟ್ ಅರ್ಜಿಯ 4 ನೇ ಕಂಡಿಕೆಯಲ್ಲಿ ಮಾಡಲಾದ ದೃಢಕ್ತಿಗಳು ಭಾಗಶಃ ಸರಿಯಾಗಿವೆ ಮತ್ತು ಎರಡನೇ ಎದುರುದಾರ ಸಂಘದ ಕೆಲ ಯುವ ಸದಸ್ಯರು ತಮ್ಮ ದುರುದ್ದೇಶಗಳು ಮತ್ತು ವೈಯಕ್ತಿಕ ಕಾರಣಗಳಿಗಾಗಿ ಪ್ರಿಸೈಡಿಂಗ್ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಹಾಗೂ ಇತರ ಕಾರ್ಯನಿರ್ವಾಹಕ ಅಧಿಕಾರಿಗಳ ವಿರುದ್ಧ ಕ್ಷುಲ್ಲಕ ಕಾರಣಗಳ ಮೇಲೆ ನಿರ್ಣಯವನ್ನು ಹೊರಡಿಸುವಂತೆ ಅರ್ಜಿದಾರ ಸಂಘದ ಪದಾಧಿಕಾರಿಗಳ ಮೇಲೆ ಒತ್ತಡ ಹೇರಿದ್ದಾರೆಂಬ ಆಪಾದನೆಯು ಸಂಪೂರ್ಣವಾಗಿ ಸುಳ್ಳಾಗಿದೆ ಹಾಗೂ ತಪ್ಪಾಗಿದೆಯೆಂದು ವಾದಿಸಲಾಗಿದೆ.ಅಲ್ಲದೆ, ಶ್ರೀ ಆರ್. ಕೆಂಪಯ್ಯ ಎಂಬುವವರು ಅರ್ಜಿದಾರ ಸಂಘದ ಅಧ್ಯಕ್ಷರಾಗಿದ್ದಾರೆ, ಅವರು ಮಾಗಡಿ ಸಂಘದ ಖಜಾಂಚಿ ಮತ್ತು ಸದಸ್ಯರಾಗಿದ್ದರು ಹಾಗೂ ಇವತ್ತಿನವರೆಗೂ ಅವರು ಮಾಗಡಿ ಸಂಘದ ಸದಸ್ಯರಾಗಿ ಮುಂದುವರೆದಿದ್ದಾರೆ.ಅಧ್ಯಕ್ಷರನ್ನು ಹೊರತುಪಡಿಸಿ, ಅರ್ಜಿದಾರ ಸಂಘದ ಬಹುತೇಕ ಸದಸ್ಯರು ಬೆಂಗಳೂರು ಹಾಗೂ ಮಾಗಡಿ ವಕೀಲರ ಸಂಘಗಳ ಸದಸ್ಯರಾಗಿದ್ದಾರೆ ಎಂದು ಸಹ ವಾದಿಸಲಾಗಿದೆ.ಮುಂದುವರೆಸುತ್ತಾ, ಅನುಬಂಧ-ಜೆ ಮತ್ತು ಕೆ,ದಿನಾಂಕ: 23.08.2006 ಮತ್ತು 07.10.2014 ರ ಪತ್ರಗಳು ಅರ್ಜಿದಾರ ಸಂಘವನ್ನು ಉಲ್ಲೇಖಿಸುವುದಿಲ್ಲ.ಮತ್ತೊಂದೆಡೆ, ಅವು ನೆಲಮಂಗಲದ ವಕೀಲರ

ಸಂಘದ ಅಧ್ಯಕ್ಷರನ್ನು ಉಲ್ಲೇಖಿಸುತ್ತವೆ ಎಂದು ವಾದಿಸಲಾಗಿದೆ.ಆದರೆ, ಅರ್ಜಿದಾರ ಸಂಘವು ಸದರಿ ದಾಖಲೆಗಳನ್ನು ತನ್ನ ಹೆಸರಿನಲ್ಲಿ ಪತ್ರ ವ್ಯವಹಾರ ಮಾಡಿರುವ ದಾಖಲೆಯಾಗಿದೆ ಎಂದು ಈಗ ವ್ಯಾಖ್ಯಾನಿಸಲು ಪ್ರಯತ್ನಿಸುತ್ತಿದೆ.ಮೊದಲನೇ ಎದುರುದಾರ ಹೊರಡಿಸಿದ ಅನುಬಂಧ-ಎಂ ಪತ್ರದ ಪ್ರಕಾರ, ಅರ್ಜಿದಾರ ಸಂಘವು ಹನ್ನೆರಡು ವರ್ಷಗಳಿಂದ ತನ್ನ ಮಂಡಳಿಗೆ ಚುನಾವಣೆ ನಡೆಸಿಲ್ಲ.ಅರ್ಜಿದಾರ ಸಂಘವು ಅಸ್ತಿತ್ವದಲ್ಲಿಲ್ಲ ಎಂಬುದನ್ನು ಈ ಅಂಶವು ಸ್ಪಷ್ಟವಾಗಿ ತೋರಿಸುತ್ತದೆ.ಅನುಬಂಧ-ಎನ್ ಪ್ರಕಾರ, ಶ್ರೀ ಕೆ. ಕೇಶವಮೂರ್ತಿ ಎಂಬುವವರನ್ನು ಅರ್ಜಿದಾರ ಸಂಘದ ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.ಸದರಿ ಕೆ. ಕೇಶವಮೂರ್ತಿ ಬೆಂಗಳೂರು ಬಾರ್ ಅಸೋಸಿಯೇಷನ್ನ ಸದಸ್ಯರಾಗಿದ್ದಾರೆ.ಮುಂದುವರೆದು, ಅರ್ಜಿದಾರ ಸಂಘವು 2010-2011 ಮತ್ತು 2011-2012ರ ಅವಧಿಯಲ್ಲಿ ಚುನಾವಣೆ ನಡೆಸಿದೆ ಎಂದು ತೋರಿಸುವ ದಾಖಲೆಗಳನ್ನು ಸೃಷ್ಟಿಸಿದೆ ಎಂದು ವಾದಿಸಿ, ರಿಟ್ ಅರ್ಜಿಯನ್ನು ವಜಾಗೊಳಿಸಲು ಕೋರಿರುತ್ತಾರೆ.

8. ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಿದ ನಂತರ, ಅರ್ಜಿದಾರ ಸಂಘವುದಿನಾಂಕ: 28.10.2009 ರಂದು ಎರಡನೇ ಎದುರುದಾರ ಸಂಘಕ್ಕೆ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ ಮತ್ತು ಅರ್ಜಿದಾರ ಸಂಘವು ಅಸ್ತಿತ್ವದಲ್ಲೇ ಇಲ್ಲ ಎಂದು ಮೊದಲನೇ ಎದುರುದಾರರು ವಾದಿಸಿಲ್ಲ. ರಿಟ್ ಅರ್ಜಿಯಲ್ಲಿ ಮಾಡಿದ ಆರೋಪಗಳನ್ನು 1 ನೇ ಎದುರುದಾರರು ವಿರೋಧಿಸಿಯೇ ಇಲ್ಲ. ಮೊದಲನೇ ಎದುರುದಾರರ ಪರ ಮಾನ್ಯ ವಕೀಲರು ಇಂದಿನವರೆಗೂ ಅರ್ಜಿದಾರರ ಸಂಘ ಅಸ್ತಿತ್ವದಲ್ಲಿದೆಯೇ?ಅಥವಾ ಇಲ್ಲವೇ?ಎಂಬುದನ್ನು ಬಾರ್ ಕೌನ್ಸಿಲ್ನ ಅಧಿಕಾರಿಯ ಸಮ್ಮುಖದಲ್ಲಿ ಹೇಳುವ ಸ್ಥಿತಿಯಲ್ಲಿಲ್ಲ.ಅರ್ಜಿದಾರರ ಸಂಘದ ಮುಖ್ಯ ವಾದವೆಂದರೆ, ಮಾನ್ಯತೆಗಾಗಿದಿನಾಂಕ: 08.10.2009 ರಂದು ಮೊದಲನೇ ಎದುರುದಾರರ ಮುಂದೆ ಎರಡನೇ ಎದುರುದಾರರು ಅರ್ಜಿ ಸಲ್ಲಿಸಬೇಕಾಗಿ ಬಂದಾಗ, ಅರ್ಜಿದಾರರುದಿನಾಂಕ: 28.10.2009 ರಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.ಆಕ್ಷೇಪಣೆಗಳನ್ನು ಪರಿಗಣಿಸಿದೆ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ರ 13 ( 3) ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಉದ್ದೇಶಿಸಲಾದಂತೆ ಕಾರ್ಯವಿಧಾನವನ್ನು ಅನುಸರಿಸದೆ, ಬಿಸಿಎಂ ಆರ್ಇಎಸ್ಸಂಖ್ಯೆ: 52/10ದಿನಾಂಕ: 12/13.6.2010 ರ ಪ್ರಶ್ನಿತ ಠರಾವಿನ ಮೂಲಕ ಎರಡನೇ ಎದುರುದಾರ ಸಂಘಕ್ಕೆ ಮಾನ್ಯತೆ ನೀಡಲು ಮೊದಲನೇ ಎದುರುದಾರರು ಮುಂದಾಗಿದ್ದಾರೆ.ಮೊದಲನೇ ಎದುರುದಾರರ ಪರ ಮಾನ್ಯ ವಕೀಲರು ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ನಿರ್ವಹಿಸಿಕೊಂಡು ಬಂದ ಮೂಲ ರಿಜಿಸ್ಟರನ್ನು ಹಾಜರುಪಡಿಸಿದ್ದರೂ, ಎರಡನೇ ಎದುರುದಾರ ಸಂಘಕ್ಕೆ ಮಾನ್ಯತೆ ನೀಡುವುದಕ್ಕೆ ಮುಂಚೆ 1 ನೇ ಎದುರುದಾರ ಬಾರ್ ಕೌನ್ಸಿಲ್ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ರ 13 ( 3) ನೇ ಪ್ರಕರಣದ ಉಪಬಂಧಗಳನ್ನು ಅನುಸರಿಸಿದೆಯೇ?ಎಂಬುದನ್ನು ನಿರೂಪಿಸುವುದಿಲ್ಲ.

9. ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ರ 13 ನೇ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಯಾವುದೇ ನ್ಯಾಯಾಲಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುವ, ಯಾವುದೇ ಹೆಸರಿನಿಂದ ಕರೆಯಲ್ಪಡುವ ವಕೀಲರ ಎಲ್ಲಾ ಸಂಘಗಳು, ಈ ಸಂಬಂಧದಲ್ಲಿ ಬಾರ್ ಕೌನ್ಸಿಲ್ನಿಂದ ಅಧಿಸೂಚಿಸಬೇಕಾದ ದಿನಾಂಕಕ್ಕಿಂತ ಮುಂಚೆ, ಮಾನ್ಯತೆಗಾಗಿ ಮತ್ತು ನೋಂದಣಿಗಾಗಿ ನಿಗದಿಪಡಿಸಬಹುದಾದಂತಹ ನಮೂನೆಯಲ್ಲಿ ಬಾರ್ ಕೌನ್ಸಿಲ್ಗೆ ಅರ್ಜಿ ಸಲ್ಲಿಸಬಹುದು ಎಂದು ಸ್ಪಷ್ಟವಾಗಿ ನಿರೂಪಿಸುತ್ತದೆ.ಮಾನ್ಯತೆಗಾಗಿ ಮತ್ತು ನೋಂದಣಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯು, ಬಾರ್ ಕೌನ್ಸಿಲ್ ಹೊರಡಿಸಿದ ಮಾದರಿ ಉಪ

ವಿಧಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಮಾಡಲಾದ ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 ರ (1960 ರ ಕರ್ನಾಟಕ ಅಧಿನಿಯಮ, 17) ಅಡಿಯಲ್ಲಿ ನೋಂದಾಯಿಸಲಾದ ಸಂಘದ ನಿಯಮಗಳು ಅಥವಾ ಉಪ ವಿಧಿಗಳನ್ನು ಮತ್ತು ಸಂಘದ ಪದಾಧಿಕಾರಿಗಳ ಹೆಸರುಗಳು ಮತ್ತು ವಿಳಾಸಗಳು ಹಾಗೂ ನೋಂದಾಯಿತವಾದ ಪ್ರತಿಯೊಬ್ಬ ಸದಸ್ಯರ ಹೆಸರು, ವಿಳಾಸ, ವಯಸ್ಸು, ದಾಖಲಾತಿ ದಿನಾಂಕವನ್ನು ಹಾಗೂ ಅವರು ಸಾಮಾನ್ಯವಾಗಿ ವಕೀಲವೃತ್ತಿ ಮಾಡುತ್ತಿರುವ ಸ್ಥಳವನ್ನು ತೋರಿಸುವ ಸಂಘದ ಸದಸ್ಯರ ಪರಿಷ್ಕೃತ ಪಟ್ಟಿಯನ್ನು ಒಳಗೊಂಡಿರತಕ್ಕದ್ದು.ಬಾರ್ ಕೌನ್ಸಿಲ್, ವಿಚಾರಣೆಯ ಅಗತ್ಯವಿದೆಯೆಂದು ಭಾವಿಸಿದಲ್ಲಿ, ಅಂತಹ ವಿಚಾರಣೆಯ ನಂತರ, ಬಾರ್ ಅಸೋಸಿಯೇಶನ್ನೆ ಮಾನ್ಯತೆ ನೀಡಬಹುದು ಮತ್ತು ನಿಗದಿಪಡಿಸಬಹುದಾದಂತಹ ನಮೂನೆಯಲ್ಲಿ ನೋಂದಣಿ 0 ಪ್ರಮಾಣಪತ್ರವನ್ನು ನೀಡಬಹುದು ಎಂದು 13 ನೇ ಪ್ರಕರಣದ ( 3) ನೇ ಉಪ ಪ್ರಕರಣವು ನಿರೂಪಿಸುತ್ತದೆ.ಬಾರ್ ಅಸೋಸಿಯೇಷನ್ ಮಾನ್ಯತೆಗೆ ಮತ್ತು ನೋಂದಣಿಗೆ ಸಂಬಂಧಿಸಿದಂತೆ ಬಾರ್ ಕೌನ್ಸಿಲ್ನ ನಿರ್ಧಾರವು ಅಂತಿಮವಾಗಿರತಕ್ಕದ್ದು ಎಂದು 13 ನೇ ಪ್ರಕರಣದ ( 4) ನೇ ಉಪ-ಪ್ರಕರಣದಲ್ಲಿ ಷರತ್ತು ವಿಧಿಸುತ್ತದೆ.

10. ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ರ 13 ( 3) ನೇ ಪ್ರಕರಣದ ಉಪಬಂಧಗಳ ಮೇಲೆ ಹೇಳಿದ ಆದೇಶದ ದೃಷ್ಟಿಯಿಂದ, ಕಾನೂನಿನ ಅಡಿಯಲ್ಲಿ ಉದ್ದೇಶಿಸಲಾದಂತೆ, ಕಾರ್ಯವಿಧಾನವನ್ನು ಅನುಸರಿಸಿದ ನಂತರ, ಮಾನ್ಯತೆಗಾಗಿದಿನಾಂಕ: 08.10.2009 ರಂದು ಎರಡನೇ ಎದುರುದಾರರ ಅರ್ಜಿಯನ್ನು ಪರಿಗಣಿಸುವುದು 1 ನೇ ಎದುರುದಾರರ ಹೊಣೆಯಾಗಿರುತ್ತದೆ.ಅರ್ಜಿದಾರರುದಿನಾಂಕ: 28.10.2009 ರಂದು ಆಕ್ಷೇಪಣೆಗಳನ್ನು ಸಲ್ಲಿಸಿದರೂ, ಪ್ರಶ್ನಿತ ಠರಾವಿನಲ್ಲಿ ಈ ಆಕ್ಷೇಪಣೆಗಳನ್ನು ಪರಿಗಣಿಸುವ ಬಗ್ಗೆ ಯಾವುದೇ ಸೂಚನೆಗಳಿಲ್ಲ.

11. ಪ್ರಶ್ನಿತ ಠರಾವು ಬಿಸಿಎಂ ಆರ್ಇಎಸ್ಸಂಖ್ಯೆ: 52/10ದಿನಾಂಕ: 12/13.06.2010 ರಲ್ಲಿ, ವಿಷಯವು ಮಾನ್ವಿ, ನಿಪ್ಪಾಣಿ, ಸುಳ್ಯ, ಬಂಟ್ವಾಳ, ಔರಾದ್, ಅಥಣಿ, ಅಂಕೋಲಾ ಮತ್ತು ತುಮಕೂರು ಬಾರ್ ಅಸೋಸಿಯೇಷನ್‌ನ ಮಾನ್ಯತೆಯನ್ನು ಪರಿಗಣಿ ಸುವ ವಿಷಯವನ್ನಷ್ಟೆ ಒಳಗೊಂಡಿದೆಯೆಂಬುದು ಬಹಳ ಎ ಕೂತೂಹಲಕರವಾಗಿದೆ.ನೆಲಮಂಗಲ ವಕೀಲರ ಸಂಘವು (ಎರಡನೇ ಎದುರುದಾರ) ಸದರಿ ನಿರ್ಣಯದ ವಸ್ತುವಿಷಯವೇ ಆಗಿರಲಿಲ್ಲ.ಆದರೆ, ಠರಾವಿನ ಎರಡನೇ ಕಂಡಿಕೆಯಲ್ಲಿ, " ಶ್ರೀ ಮಂಜುನಾಥರವರ ಅಧ್ಯಕ್ಷತೆಯಲ್ಲಿ ರಚಿಸಲಾದ ನೆಲಮಂಗಲ ವಕೀಲರ ಸಂಘಕ್ಕೆ ಮಾನ್ಯತೆ ನೀಡಲು ತೀರ್ಮಾನಿಸಲಾಗಿದ್ದು, ಅದಕ್ಕೆ ಸಂಘಗಳ ರಿಜಿಸ್ಟ್ರಾರ್‌ವರುದಿನಾಂಕ: 17.09.2009 ರ ನೋಂದಣಿ ಪ್ರಮಾಣಪತ್ರವನ್ನು ನೀಡಿರುತ್ತಾರೆ ” ಎಂದು ಹೇಳಲಾಗಿದೆ.ಮಾನ್ಯತೆ ನೀಡುವುದಕ್ಕಿಂತ ಮುಂಚೆ, ಅರ್ಜಿದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಬಾರ್ ಕೌನ್ಸಿಲ್ ಪರಿಗಣಿಸಿಲ್ಲ ಮತ್ತು ಸಭೆಯಲ್ಲಿ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳದಿದ್ದರೂ ಸಹ, ಮೊದಲನೇ ಎದುರುದಾರರು ಆಕ್ಷೇಪಿತ ಠರಾವನ್ನು ಹೇಗೆ ಅಂಗೀಕರಿಸಿದರೆಂಬ ಮಾಹಿತಿ ತಿಳಿಸಿರುವುದಿಲ್ಲ.

12. ಠರಾವುಸಂಖ್ಯೆ: 100/14,ದಿನಾಂಕ: 13.07.2014 ರ ಪ್ರಕಾರ, ಅರ್ಜಿದಾರ ಸಂಘವು ಅಸ್ತಿತ್ವದಲ್ಲಿಲ್ಲ ಮತ್ತುದಿನಾಂಕ: 10.07.2014 ರ ಅರ್ಜಿದಾರ ಸಂಘದ ಅರ್ಜಿಯನ್ನು ಮೊದಲನೇ ಎದುರುದಾರರು ತಿರಸ್ಕೃತಗೊಳಿಸಿದ್ದರು ಎಂದು ಎರಡನೇ ಎದುರುದಾರರ ಪರ ಮಾನ್ಯ ವಕೀಲರು ನ್ಯಾಯಾಲಯದ ಮುಂದೆ ವಾದಿಸಿ ಮನವೊಲಿಸಲು ಪ್ರಯತ್ನಿಸಿದರು.ಆದರೆ, ಪುಸ್ತಕಸಂಖ್ಯೆ: 12, ಪುಟಸಂಖ್ಯೆ: 190, ಠರಾವುಸಂಖ್ಯೆ: 100/14 ರಲ್ಲಿನ ಮೂಲ ರಿಜಿಸ್ಟರ್‌ನ ಪರಿಶೀಲನೆಯಿಂದ ಅದನ್ನು ಈ ಕೆಳಗಿನಂತೆ ಮಾತ್ರ ಹೇಳಲಾಗಿದೆ: ಠರಾವುಸಂಖ್ಯೆ:

100/14:ಪರ್ಯಾಯ ಸಂಘವನ್ನು ರಚಿಸಲು ವಕೀಲರ ಮಂಡಳಿಯು ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ಸರ್ವಾನುಮತದಿಂದ ತಿರಸ್ಕರಿಸಲಾಗಿದೆ.ಆದಾಗ್ಯೂ, ಬಾರ್ ಕೌನ್ಸಿಲ್ನ ಮಾನ್ಯ ಸದಸ್ಯರುಗಳಾದ ಶ್ರೀ ಸಿ.ಆರ್. ಗೋಪಾಲಸ್ವಾಮಿ, ಶ್ರೀ ಮುನಿಯಪ್ಪ ಮತ್ತು ಶ್ರೀ ಮಲ್ಲೇಶಯ್ಯರವರನ್ನು ವಿವಾದವೇನಿದೆಯೋ ಅದನ್ನು ಬಗೆಹರಿಸುವಂತೆ ವಿನಂತಿಸಲಾಗಿದೆ ".

13. 2 ನೇ ಎದುರುದಾರರ ಪರ ಮಾನ್ಯ ವಕೀಲರು ಉಲ್ಲೇಖಿಸಲಾದ ಸದರಿ ನಿರ್ಣಯವನ್ನು, ಎರಡನೇ ಎದುರುದಾರರು ಈ ನ್ಯಾಯಾಲಯದ ಮುಂದೆ ಇಲ್ಲದಿರುವುದರಿಂದ, ಈ ಪ್ರಕರಣದಲ್ಲಿ ಪರಿಗಣಿಸಲಾಗುವುದಿಲ್ಲ.ಅರ್ಜಿದಾರರು ಎರಡನೇ ಎದುರುದಾರರಿಗೆ ನೀಡಲಾದ ಮಾನ್ಯತೆಯನ್ನು ಪ್ರಶ್ನಿಸಲು ಮಾತ್ರ ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ ಮತ್ತು ಆದ್ದರಿಂದ, ಈ ನ್ಯಾಯಾಲಯವು ರಿಟ್ ಅರ್ಜಿಯ ವ್ಯಾಪ್ತಿಯನ್ನು ವಿಸ್ತರಿಸಲಾಗುವುದಿಲ್ಲ ಹಾಗೂ ಅರ್ಜಿದಾರ ಸಂಘವು ಅಸ್ತಿತ್ವದಲ್ಲಿಲ್ಲ ಮತ್ತು ಸಲ್ಲಿಸಲಾದ ಅರ್ಜಿಯನ್ನು ಈಗಾಗಲೇ ತಿರಸ್ಕರಿಸಲಾಗಿದೆ ಎಂಬುದು ಬಾರ್ ಕೌನ್ಸಿಲ್ನ ವಾದವಾಗಿರುವುದಿಲ್ಲ.ಹಾಗೆ ಪ್ರಶ್ನಿಸದಿರುವುದರಿಂದ, ಎರಡನೇ ಎದುರುದಾರರ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

14. ಅರ್ಜಿದಾರ ಸಂಘದ ಕೆಲವರು ಸದಸ್ಯರು ಮಾಗಡಿ ಮತ್ತು ಬೆಂಗಳೂರು ನ್ಯಾಯವಾದಿಗಳ ಸಂಘದ ಸದಸ್ಯರಾಗಿದ್ದಾರೆ ಎಂದು ಎರಡನೇ ಎದುರುದಾರ ಪರ ಮಾನ್ಯ ವಕೀಲರು ಬಲವಾಗಿ ವಾದಿಸಿದ್ದಾರೆ.ಅರ್ಜಿದಾರ ಸಂಘವು ಅಸ್ತಿತ್ವದಲ್ಲಿದೆಯೇ?ಅಥವಾ ಇಲ್ಲವೇ?ಎಂಬುದನ್ನು ಅರ್ಜಿದಾರರು ಸಲ್ಲಿಸಿದ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಂಡು, ಮೊದಲನೇ ಎದುರುದಾರರು ಪರಿಗಣಿಸಬೇಕಾಗಿರುತ್ತದೆ.ಈ ವಿಷಯವನ್ನು ಬಾರ್ ಕೌನ್ಸಿಲ್ ಹೊಸದಾಗಿ ಮರುಪರಿಶೀಲಿಸುವ ಅಗತ್ಯವಿದೆ.

15. ವಕೀಲರ ಅಧಿನಿಯಮ, 1961 ರ 3 ನೇ ಪ್ರಕರಣವು ರಾಜ್ಯ ಬಾರ್ ಕೌನ್ಸಿಲ್ಗಳನ್ನು ನಿರ್ದಿಷ್ಟಪಡಿಸುತ್ತದೆ.ಅಧಿನಿಯಮದ 6 ನೇ ಪ್ರಕರಣವು ರಾಜ್ಯ ಬಾರ್ ಕೌನ್ಸಿಲ್ನ ಕಾರ್ಯಗಳನ್ನು ನಿಗದಿಪಡಿಸುತ್ತದೆ.ಅವುಗಳನ್ನು ಈ ಕೆಳಗಿನಂತೆ ಓದಲಾಗುತ್ತದೆ:

6. ರಾಜ್ಯ ಬಾರ್ ಕೌನ್ಸಿಲ್ಗಳ ಕಾರ್ಯಗಳು:

(1) ರಾಜ್ಯ ಬಾರ್ ಕೌನ್ಸಿಲ್ನ ಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು, ವಕೀಲರ ಸಂಘ, ನೆಲಮಂಗಲ ವಿರುದ್ಧ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಮತ್ತು ಇನ್ನೊಬ್ಬರು 61

( ಎ) ತನ್ನ ಹೆಸರುಪಟ್ಟಿಯಲ್ಲಿ ವ್ಯಕ್ತಿಗಳನ್ನು ನ್ಯಾಯವಾದಿಗಳನ್ನಾಗಿ ಸೇರಿಸುವುದು;

(ಬಿ) ಅಂಥ ಹೆಸರು ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ನಿರ್ವಹಿಸುವುದು;

(ಸಿ) ಅದರ ಹೆಸರುಪಟ್ಟಿಯಲ್ಲಿರುವ ವಕೀಲರ ವಿರುದ್ಧದ ದುರ್ನಡತೆಯ ಪ್ರಕರಣಗಳನ್ನು ಸ್ವೀಕರಿಸುವುದು ಮತ್ತು ನಿರ್ಧರಿಸುವುದು;

(ಡಿ) ಅದರ ಹೆಸರು ಪಟ್ಟಿಯಲ್ಲಿರುವ ವಕೀಲರ ಹಕ್ಕುಗಳು, ಸವಲತ್ತುಗಳು ಮತ್ತು ಹಿತಾಸಕ್ತಿಗಳನ್ನು ಕಾಪಾಡುವುದು;

(ಡಿಡಿ) 7 ನೇ ಪ್ರಕರಣದ ( 2) ನೇ ಉಪ-ಪ್ರಕರಣದ (     ಎ) ಖಂಡದಲ್ಲಿ ಉಲ್ಲೇಖಿಸಲಾದ ಶ್ರೇಯೋಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಉದ್ದೇಶಗಳಿಗಾಗಿ ಬಾರ್ ಅಸೋಸಿಯೇಷನ್‌ಗಳ ಬೆಳವಣಿಗೆಯನ್ನು ಉತ್ತೇಜಿಸುವುದು;

( ಇ) ಕಾನೂನು ಸುಧಾರಣೆಯನ್ನು ಉತ್ತೇಜಿಸುವುದು ಮತ್ತು ಬೆಂಬಲಿಸುವುದು;

(ಇಇ) ವಿಚಾರಸಂಕಿರಣಗಳನ್ನು ನಡೆಸುವುದು ಮತ್ತು ಪ್ರಖ್ಯಾತ ನ್ಯಾಯಶಾಸ್ತ್ರಜ್ಞರಿಂದ ಕಾನೂನು ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಆಯೋಜಿಸುವುದು ಮತ್ತು ಕಾನೂನು ಕೇಂದ್ರಿತ ನಿಯತಕಾಲಿಕೆಗಳನ್ನು ಹಾಗೂ ಲೇಖನಗಳನ್ನು ಪ್ರಕಟಿಸುವುದು;

(ಇಇಇ) ಬಡವರಿಗೆ ಕಾನೂನು ನೆರವನ್ನು ನಿಗದಿತ ರೀತಿಯಲ್ಲಿ ಆಯೋಜಿಸುವುದು;

(ಎಫ್) ಬಾರ್ ಕೌನ್ಸಿಲ್‌ನ ನಿಧಿಗಳನ್ನು ನಿರ್ವಹಿಸುವುದು ಮತ್ತು ಹೂಡಿಕೆ ಮಾಡುವುದು;

ತನ್ನ ಸದಸ್ಯರ ಚುನಾವಣೆಯನ್ನು ಏರ್ಪಾಡು ಮಾಡುವುದು;

(ಜಿಜಿ) 7 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ( 1) ನೇ ಖಂಡದ ಅಡಿಯಲ್ಲಿ ನೀಡಲಾದ ನಿರ್ದೇಶನಗಳಿಗೆ ಅನುಸಾರವಾಗಿ ವಿಶ್ವವಿದ್ಯಾನಿಲಯಗಳಿಗೆ ಭೇಟಿ ಕೊಡುವುದು ಮತ್ತು ತನಿಖೆ ಮಾಡುವುದು;

(ಎಚ್) ಈ ಅಧಿನಿಯಮದ ಮೇರೆಗೆ ಅಥವಾ ಅದರ ಅಡಿಯಲ್ಲಿ ನೀಡಲಾದ ಇತರ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು;

(ಐ) ಮೇಲೆ ಹೇಳಲಾದ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಇತರ ಎಲ್ಲಾ ಕೆಲಸಗಳನ್ನು ಮಾಡುವುದು.

(2) ರಾಜ್ಯ ಬಾರ್ ಕೌನ್ಸಿಲ್ ಈ ಕೆಳಕಂಡ ಉದ್ದೇಶಗಳಿಗಾಗಿ ಒಂದು ಅಥವಾ ಹೆಚ್ಚಿನ ನಿಧಿಗಳನ್ನು ನಿಗದಿತ ರೀತಿಯಲ್ಲಿ ಈ ಮುಂದಿನ ಉದ್ದೇಶಗಳಿಗಾಗಿ ರಚಿಸಬಹುದು

( ಎ) ಬಡ, ಅಂಗವಿಕಲ ಅಥವಾ ಇತರ ವಕೀಲರಿಗಾಗಿ ಕ್ಷೇಮಾಭಿವೃದ್ಧಿ ಮುಗಳನ್ನು ಆಯೋಜಿಸಲು ಹಣಕಾಸು ನೆರವನ್ನು ನೀಡುವುದು;

(ಬಿ) ಈ ಸಂಬಂಧ ಮಾಡಲಾದ ನಿಯಮಗಳಿಗೆ ಅನುಸಾರವಾಗಿ ಕಾನೂನು ನೆರವನ್ನು ಅಥವಾ ಕಾನೂನು ಸಲಹೆಯನ್ನು ನೀಡುವುದು;

(ಸಿ) ಕಾನೂನು ಗ್ರಂಥಾಲಯಗಳನ್ನು ಸ್ಥಾಪಿಸುವುದು.

(3) ( 2) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಅಥವಾ ಯಾವುದೇ ಉದ್ದೇಶಗಳಿಗಾಗಿ ಬಾರ್ ಕೌನ್ಸಿಲ್ ಯಾವುದೇ ಅನುದಾನಗಳು, ದೇಣಿಗೆಗಳು, ಉಡುಗೊರೆಗಳು ಅಥವಾ ದತ್ತಿಗಳನ್ನು ಸ್ವೀಕರಿಸಬಹುದು ಮತ್ತು ಆ ಉಪ-ಪ್ರಕರಣದ ಅಡಿಯಲ್ಲಿ ರಚಿಸಲಾದ ಸೂಕ್ತ ನಿಧಿ ಅಥವಾ ನಿಧಿಗಳಿಗೆ ಅದನ್ನು ಜಮಾ ಮಾಡತಕ್ಕದ್ದು.

16. ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ರ (11) ನೇ ಪ್ರಕರಣದ ಉಪಬಂಧಗಳು ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ಹೇಳುತ್ತವೆ ಹಾಗೂ 13 ನೇ ಪ್ರಕರಣವು ಬಾರ್ ಅಸೋಸಿಯೇಷನ್ನಳ ಮಾನ್ಯತೆ ಮತ್ತು ನೋಂದಣಿಯ ಬಗ್ಗೆ ಹೇಳುತ್ತದೆ.ಃ ವಕೀಲರ ಅಧಿನಿಯಮ, 1961, ಬಾರ್ ಕೌನ್ಸಿಲ್ ಆಫ್ ಇಂಡಿಯಾ ನಿಯಮಗಳು ಮತ್ತು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ರ ಉಪಬಂಧಗಳ ದೃಷ್ಟಿಯಿಂದ, ಕರ್ನಾಟಕ ರಾಜ್ಯದ ಎಲ್ಲಾ ವಕೀಲರ ಸಂಘಗಳಿಗೆ " ತಾಯಿ " ಯಂತೆ ವರ್ತಿಸುವುದು ಬಾರ್ ಕೌನ್ಸಿಲ್ನ ಕರ್ತವ್ಯವಾಗಿದೆ ಮತ್ತು ನ್ಯಾಯಾಲಯವನ್ನು ನ್ಯಾಯ C ದೇಗುಲ " ಎಂದು, ಪರಿಗಣಿಸಿ, ಹೆಚ್ಚಿನ ನಿರೀಕ್ಷೆಗಳೊಂದಿಗೆ ನ್ಯಾಯಾಲಯಕ್ಕೆ ಬರುವ ಬಡ ದಾವೆದಾರರಿಗೆ ನ್ಯಾಯ ಒದಗಿಸುವ ಸಲುವಾಗಿ ವಕೀಲರು ಸರಿಯಾದ ಶಿಸ್ತನ್ನು ಕಾಪಾಡಿಕೊಂಡಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳುವುದು ಬಾರ್ ಕೌನ್ಸಿಲ್ನ ಕರ್ತವ್ಯವಾಗಿದೆ ಮತ್ತು ಕರ್ನಾಟಕದ ವಕೀಲರ ಸಂಘಗಳ ಸದಸ್ಯರ ಶ್ರೇಯೋಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೀಡಿದ ನಿಧಿಗಳು ಸೂಕ್ತವಾಗಿ ಬಳಕೆಯಾಗುವಂತೆ ನೋಡಿಕೊಳ್ಳುವುದು ಮತ್ತು ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ನ ಘನತೆ ಮತ್ತು ಗಾಂಭೀರ್ಯವನ್ನು ಎತ್ತಿಹಿಡಿಯುವ ಸಲುವಾಗಿ ಶ್ರೇಯೋಭಿವೃದ್ಧಿ ಅಂಚೆಚೀಟಿಗಳ ಮುದ್ರಣದಲ್ಲಿ ಮತ್ತು ಅವುಗಳ ಮಾರಾಟದಲ್ಲಿ ಸಹ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದು ಸಹ ಬಾರ್ ಕೌನ್ಸಿಲ್ನ ಕರ್ತವ್ಯವಾಗಿದೆ.ರಾಜ್ಯದ ಎಲ್ಲಾ ಸಂಘಗಳು ಬಾರ್ನ ಸದಸ್ಯರ ನಡುವೆ ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕು ಮತ್ತು ವಕೀಲರ ಅಧಿನಿಯಮ, 1961 ರ ಪ್ರಕಾರ ತಪ್ಪಿತಸ್ಥ ವಕೀಲರ ಸಂಘಗಳು ಮತ್ತು ಅದರ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವುದು ಮೊದಲನೇ ಎದುರುದಾರರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ.ಎರಡನೇ ಎದುರುದಾರರಿಗೆ ಮಾನ್ಯತೆ ನೀಡುವಾಗ, 1 ನೇ ಎದುರುದಾರ/ಬಾರ್ ಕೌನ್ಸಿಲ್, ಅರ್ಜಿದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲೇಬೇಕಿತ್ತು ಮತ್ತು ರೂಪಿಸಲಾದಂತೆ ನಿಯಮಗಳು ಮತ್ತು ವಿನಿಯಮಗಳು ಹಾಗೂ ಅಧಿನಿಯಮದ ಉಪಬಂಧಗಳನ್ನು ಪರಿಶೀಲಿಸಬೇಕಿತ್ತು.ಸದ್ಯದ ಪ್ರಕರಣದಲ್ಲಿ ಹಾಗೆ ಮಾಡಿರುವುದಿಲ್ಲ.

17. ಇಡೀ ದೇಶಕ್ಕಾಗಿ ಒಂದು ಸಾಮಾನ್ಯ ನ್ಯಾಯವಾದಿ ವರ್ಗವನ್ನು (ಬಾರ್) ರೂಪಿಸುವುದು ಮತ್ತು ಅದರ ನಿಯಂತ್ರಿತ ಕಾರ್ಯಚಟುವಟಿಕೆಗಾಗಿ ಒಂದು ವ್ಯವಸ್ಥೆಯನ್ನು ಕಲ್ಪಿಸುವುದು ವಕೀಲರ ಅಧಿನಿಯಮದ ಉದ್ದೇಶವಾಗಿದೆ.ಅಧಿನಿಯಮವು ತನ್ನ ಸ್ವರೂಪದಲ್ಲಿ ಸ್ವಾಯತ್ತವಾದ ಒಂದು ನ್ಯಾಯವಾದಿ ಸಂಘವನ್ನು (ಬಾರ್ ಅನ್ನು ಸ್ಥಾಪಿಸುವುದರಿಂದ, ಅದರಡಿಯಲ್ಲಿ ಸ್ಥಾಪಿಸಲಾದ ಬಾರ್ ಕೌನ್ಸಿಲ್ಗಳಿಗೆ ಆ ವೃತ್ತಿಯ ಕಾರ್ಯನಿರ್ವಹಣೆಯನ್ನು ನಿಯಂತ್ರಿಸುವ ಅಧಿಕಾರವನ್ನು ವಹಿಸಲಾಗಿದೆ ಮತ್ತು ವೃತ್ತಿಪರ ನಡವಳಿಕೆ ಮತ್ತು ಶಿಷ್ಟಾಚಾರದ ನಿಯಮಗಳನ್ನು ನಿಗದಿಪಡಿಸುವ ಹಾಗೂ ಅಂಥ ನಿಯಮಗಳನ್ನು ಉಲ್ಲಂಘಿಸುವವರನ್ನು ಶಿಕ್ಷಿಸುವ ಅಧಿಕಾರವನ್ನು ವಹಿಸಲಾಗಿದೆ.ತನ್ನ ಸಮಾನರಿಂದ ವಕೀಲರ ಅಧಿವಿಚಾರಣೆಯನ್ನು ಖಚಿತಪಡಿಸಿ, ಶಿಕ್ಷೆಯ ಅಧಿಕಾರವನ್ನು ಶಿಸ್ತು ಸಮಿತಿಗಳಿಗೆ ವಹಿಸಲಾಗಿದೆ.35, 36 ಮತ್ತು 37 ನೇ ಪ್ರಕರಣಗಳು ರಾಜ್ಯ ಬಾರ್ ಕೌನ್ಸಿಲ್ಗಳು ಹೊರಡಿಸಿದ ಆದೇಶಗಳಿಂದ ಬಾರ್ ಕೌನ್ಸಿಲ್ ಆಫ್ ಇಂಡಿಯಾಗೆ ದೂರುಗಳನ್ನು ಅಧಿವಿಚಾರಣೆ ಮಾಡುವುದಕ್ಕೆ, ಶಿಕ್ಷೆ ನೀಡುವುದಕ್ಕೆ ಹಾಗೂ ಅಪೀಲು ಸಲ್ಲಿಸುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನಗಳನ್ನು ತಿಳಿಸುತ್ತವೆ. ಹೆಚ್ಚುವರಿ ಪರಿಹಾರವಾಗಿ, 38 ನೇ ಪ್ರಕರಣವು ಸರ್ವೋಚ್ಚ ನ್ಯಾಯಾಲಯಕ್ಕೆ ಮತ್ತಷ್ಟು ಅಪೀಲನ್ನು ಸಲ್ಲಿಸಲು ಅವಕಾಶ ಕಲ್ಪಿಸುತ್ತದೆ.ಈ ಅಧಿನಿಯಮವು ಕಾನೂನು ವೃತ್ತಿನಿರತರಿಗೆ ಸಂಬಂಧಿಸಿದ್ದರೂ, ಅದರ ಸಾರಾಂಶದಲ್ಲಿ, ವಕೀಲರ ಅರ್ಹತೆಗಳು, ದಾಖಲಾತಿ, ವಕೀಲವೃತ್ತಿ ಮಾಡುವ ಹಕ್ಕು ಮತ್ತು ಶಿಸ್ತುಗಳೊಂದಿಗೆ ತಾನಾಗಿಯೇ ಸ ಂ ಬ ಂ ಧಪಡುವ ಅಧಿನಿಯಮಿತಿಯಾಗಿದೆ.ಈ ಈ ಹಂತದಲ್ಲಿ

ಹಂತದಲ್ಲಿ ತಮ್ಮನ್ನು ಹೀರೋಗಳೆಂದು ಗುರುತಿಸಿಕೊಳ್ಳಲು ಬಯಸುವ ಹಲವರು ವ್ಯಕ್ತಿಗಳು/ವಕೀಲರ ನಾಯಕತ್ವದಲ್ಲಿ ಸಂಘಗಳು ನಾಯಿಕೊಡೆಗಳಂತೆ ಇದ್ದಕ್ಕಿದ್ದಂತೆ ಹುಟ್ಟಿಕೊಳ್ಳುತ್ತಿವೆ.ಅಂಥ ಹಠಾತ್ ಬೆಳವಣಿಗೆಯು ವಕೀಲರ ನಡುವೆ ವೈಮನಸ್ಯವನ್ನು ಮೂಡಿಸುತ್ತದೆ ಹಾಗೂ ಅಂತಿಮವಾಗಿ, ಒಳಜಗಳಗಳಿಗೆ ಕಾರಣವಾಗುತ್ತದೆ ಹಾಗೂ ಆ ಮೂಲಕ ಈ ಉದಾತ್ತ ವೃತ್ತಿಯ ಘನತೆ ಮತ್ತು ಖ್ಯಾತಿಯನ್ನು ಎತ್ತಿಹಿಡಿಯಲು ಅಗತ್ಯವಾದ ನ್ಯಾಯಿಕ ವೃತ್ತಿಯ ಕಡೆ ಅವರು ಗಮನಹರಿಸುವುದಿಲ್ಲ ಎಂದು ಹೇಳುವುದು ಸೂಕ್ತವಾಗಿದೆ.ಅಂತಿಮವಾಗಿ, ಈ ವೃತ್ತಿಯನ್ನು ಸಾರ್ವಜನಿಕ ಹಿತ " ಎಂದು ಪರಿಗಣಿಸುವ ಮೂಲಕ ರೂಪಿಸಲಾಗಿದೆ.ಎಂದರೆ, ನ್ಯಾಯವಾದಿ ವರ್ಗದಿಂದ ದಕ್ಷ ಮತ್ತು ಇಚ್ಛಾಪೂರ್ವಕವಾದ ನೆರವು ನೀಡುವ ಭರವಸೆಯನ್ನು ನ್ಯಾಯಾಲಯಕ್ಕೆ ನೀಡತಕ್ಕದ್ದು.ಇಂತಹ ಬೆಳವಣಿಗೆಯು ಬಾರ್ ಕೌನ್ಸಿಲ್ನ ವಿವಿಧ ಪ್ರವರ್ಗಗಳ ನಡುವಿನ ಸಂಬಂಧಗಳಲ್ಲಿ ಮತ್ತಷ್ಟು ಸುಧಾರಿಸುವುದರ ಮುನ್ಸೂಚಕವಾಗಿದೆ ಎಂದು ಭಾವಿಸಬೇಕಿದೆ.ಇದರಿಂದಾಗಿ, ಅದು ಹಿಂದಿನಿಂದಲೂ ಆರ್ಜಿಸಿಕೊಂಡು ಬಂದ ಎಲ್ಲ ಅತ್ಯುತ್ತಮ ಸಂಪ್ರದಾಯಗಳೊಂದಿಗೆ ಏಕೀಕೃತವಾದ ವಕೀಲರ ಸಂಘ (ಬಾರ್) ಆಗಿ ಬೆಳೆಯಬಹುದು ಮತ್ತು ಕಾನೂನುವೃತ್ತಿಯ ಶಾಶ್ವತ ವಿಶ್ವಾಸಾರ್ಹತೆಗೆ ಮತ್ತು ಕಾನೂನು ಹಾಗೂ ನ್ಯಾಯಕ್ಕೆ ಸಂಬಂಧಪಟ್ಟವರೆಲ್ಲರ ಶಾಶ್ವತ ಪ್ರಯೋಜನಕ್ಕಾಗಿ ಮುಂಬರುವ ವರ್ಷಗಳಲ್ಲಿ ಎತ್ತಿಹಿಡಿಯುವುದು ಅದರ ಕರ್ತವ್ಯವಾಗಿದೆ.

18. ಒಂದು ಸಂಘದ ಸದಸ್ಯರು ಬೇರೆ ಯಾವುದೇ ಸಂಘದ ಸದಸ್ಯರಲ್ಲ ಎಂದು ಖಚಿತಪಡಿಸಿಕೊಳ್ಳುವುದೂ ಸಹ ಬಾರ್ ಕೌನ್ಸಿಲ್ನ ಕರ್ತವ್ಯವಾಗಿದೆ.ಸಂಘಗಳ ನೋಂದಣಿ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಇದನ್ನು ನಿಷೇಧಿಸಲಾಗಿದೆ.ಸದಸ್ಯರು ಸಾಕಷ್ಟು ಎ ಶಿಸ್ತನ್ನು ಕಾಪಾಡಿಕೊಂಡಿದ್ದಾರೆಂದು ಖಚಿತಪಡಿಸಿಕೊಳ್ಳಬೇಕು.ಸದಸ್ಯರು ಶಿಸ್ತು ಕಾಪಾಡದಿದ್ದರೆ, ಅವರಿಂದ ಅಗತ್ಯವಿರುವ ದಾವೆದಾರರಿಗೆ ಯಾವ ರೀತಿಯ ಕಾನೂನು ಸೇವೆಯನ್ನು ನಿರೀಕ್ಷಿಸಬಹುದು?ಆದ್ದರಿಂದ, ಬಾರ್ ಕೌನ್ಸಿಲ್ ಎಲ್ಲಾ ವಕೀಲರ ಸಂಘಗಳ ಸರಿಯಾದ ಆಡಳಿತವನ್ನು ಮತ್ತು ದಾವೆ ಹೂಡುವ ಸಾರ್ವಜನಿಕರಿಗೆ ವಕೀಲರು ಸೇವೆಯನ್ನು ಸಲ್ಲಿಸುವಂತೆ ನೋಡಿಕೊಳ್ಳಬೇಕು.

19. ಮೇಲೆ ಹೇಳಲಾದ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು, ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ.ಎರಡನೇ ಎದುರುದಾರರನ್ನು ಪರಿಗಣಿಸಿ 1 ನೇ ಎದುರುದಾರ-ಬಾರ್ ಕೌನ್ಸಿಲ್ ಅಂಗೀಕರಿಸಿದ ಪ್ರಶ್ನಿತ ಠರಾವನ್ನು ಈ ಮೂಲಕ ರದ್ದುಪಡಿಸಲಾಗಿದೆ ಮತ್ತು ಆಕ್ಷೇಪಣೆಗಳನ್ನು ಪರಿಗಣಿಸಿದ ನಂತರ ಹೊಸದಾಗಿ ಮರುಪರಿಶೀಲಿಸಲು ವಿಷಯವನ್ನು ಮೊದಲನೇ ಎದುರುದಾರ-ಬಾರ್ ಕೌನ್ಸಿಲ್ಗೆ ವಾಪಸ್ಸು ಕಳುಹಿಸಲಾಗಿದೆ ಮತ್ತು ಅರ್ಜಿದಾರ ಹಾಗೂ ಎರಡನೇ ಎದುರುದಾರರ ವಾದಗಳನ್ನು ಆಲಿಸಿದ ನಂತರ, ಕಾನೂನು ಪ್ರಕಾರ ಸೂಕ್ತವಾದ ಆದೇಶಗಳನ್ನು ಕಟ್ಟುನಿಟ್ಟಾಗಿ ಹೊರಡಿಸಲಾಗಿದೆ.ಎರಡೂ ಸಂಘಗಳಿಗೆ ಬಾರ್ ಕೌನ್ಸಿಲ್, " ತಾಯಿ " ಯಂತೆ ವರ್ತಿಸುತ್ತದೆ ಮತ್ತು ವಿವಾದವನ್ನು ಬಗೆಹರಿಸಲು ಪ್ರಯತ್ನಿಸುತ್ತದೆ ಮತ್ತು ನೆಲಮಂಗಲದಲ್ಲಿ ಬಾರ್ ಅಸೋಸಿಯೇಷನ್ನ ಮಾನ್ಯ ಸದಸ್ಯರುಗಳ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಒಂದು ಬಾರ್ ಅಸೋಸಿಯೇಷನ್ ಮುಂದುವರಿಯುವಂತೆ ನೋಡಿಕೊಳ್ಳುತ್ತದೆ ಎಂದು ಈ ನ್ಯಾಯಾಲಯವು ಭಾವಿಸುತ್ತದೆ ಹಾಗೂ ನಂಬುತ್ತದೆ.

ಅದರಂತೆ ಆದೇಶಿಸಲಾಗಿದೆ.